**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 06-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 49/2021
CW-7 PW-7

ಸಾಕ್ಷಿದಾರರ ಹೆಸರು – ಬಾಲಕೃಷ್ಣ ಎಸ್ ಸಿದ್ನಾಳ

ವಯಸ್ಸು – 43 ವರ್ಷ

ಉದ್ಯೋಗ – ಎಚ್ ಸಿ

ಸಾಕೀನ – ಗೋಕಾಕ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2018 ರಿಂದ 2021 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 13-11-2020 ರಂದು ಚಾಸಾ 9 ರವರು 1 ರಿಂದ 3 ನೇ ಆರೋಪಿಗಳನ್ನು ತಪಾಸಿಸಿ ವರದಿ ನೀಡುವಂತೆ ನಿರ್ದೇಶಿಸಿದ್ದು, ಆ ಪ್ರಕಾರ ನಾನು ಉದಗಟ್ಟಿ, ತಪಸಿ, ಹಡಗಿನಾಳ ಗ್ರಾಮಗಳಿಗೆ ಹೋಗಿ ಅವರ ಮನೆಗಳಲ್ಲಿ ವಿಚಾರಿಸಲಾಗಿ ಆರೋಪಿಗಳು ಅವರ ಮನೆಗಳಲ್ಲಿ ಇರಲಿಲ್ಲ, ಪ್ರಕರಣ ದಾಖಲಾದಾಗಿನಿಂದ ತಲೆಮರೆಸಿಕೊಂಡಿರುತ್ತಾರೆ ಎಂದು ತಿಳಿಸಿದರು. ಅದೇ ರೀತಿ ನಾನು ಪ್ರಕರಣದ ಖೊಟ್ಟಿ ದಾಖಲೆಗಳ ಬಗ್ಗೆ ಸಹ ಪರಿಶೀಲಿಸಿದಾಗ, ಸಮಂಜಸ ಮಾಹಿತಿ ಸಿಗಲಿಲ್ಲ. ನಂತರ ತಪಾಸಣೆ ಮಾಡಿದಾಗಿಯೂ ಆರೋಪಿಗಳು ಸಿಗದ ಕಾರಣ ನಾನು ಚಾಾ 9 ರವರಿಗೆ ಈ ಕುರಿತು ವರದಿ ನೀಡಿರುತ್ತೇನೆ.

2) ಸಾಕ್ಷಿ ದಿಃ 13-11-2020 ರಂದು ಚಾಸಾ 9 ರವರರಿಗೆ ಸಲ್ಲಿಸಿರುವ ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-65 ಎಂದು, ಸಾಕ್ಷಿಯ ಸಹಿಯನ್ನು ನಿಪಿ-65(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) ನಾನು ಆರೋಪಿಗಳ ಪತ್ತೆಗಾಗಿ ಸದರಿ ಗ್ರಾಮಗಳಿಗೆ ಹೋದಾಗ ವಿಚಾರಿಸಿದ ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿಲ್ಲ. ಆರೋಪಿಗಳ ಮನೆಗಳನ್ನು ದಿಃ 13-11-2020 ರಂದೇ ತಪಾಸಿಸಿದ್ದು, ಅವರ ಮನೆಗಳಲ್ಲಿ ಇದ್ದ ವ್ಯಕಿಗಳ ಹೆಸರು ನನಗೆ ಗೊತ್ತಿಲ್ಲ. ನಾನು ಸದರಿ ಗ್ರಾಮಗಳಿಗೆ ಭೇಟಿ ನೀಡದೆ ಮತ್ತು ಯಾರನ್ನೂ ವಿಚಾರಿಸದೆ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಿಪಿ-65 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.